**ಒಂದನೇ ಅಪರ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕನಕಪುರ ರವರ ನ್ಯಾಯಾಲಯ, ಕನಕಪುರ**

**ಸಿ ಸಿ 779/2018**

ಪಿರ್ಯಾದಿದಾರರು: ಕರ್ನಾಟಕ ಸರ್ಕಾರ
(ಕೋಡಿಹಳ್ಳಿ ಪೋಲೀಸ್ ಠಾಣೆ )

ವಿರುದ್ಧ

ಆರೋಪಿ: ಶಿವಣ್ಣ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರಶ್ನೆ 1: ಈ ಪ್ರಕರಣದ ಈವರೆಗೆ ನಡೆಸಿದ ಸಾಕ್ಷಿಯ ವಿಚಾರಣೆಯನ್ನು ಕೇಳಿದ್ದಿರಾ?
ಆರೋಪಿಯ ಉತ್ತರ:

ಪ್ರಶ್ನೆ 2: ಪ್ರಾಸಾ-2 ಚಿಕ್ಕಸಿದ್ದೇಗೌಡ, ನಿವೃತ್ತ ಸಬ್ ಇನ್ಸಪೆಕ್ಟರ್ ಇವರು ತಮ್ಮ ಸಾಕ್ಷಿಯಲ್ಲಿ, ದಿನಾಂಕ:27.04.2016 ರಂದು ಸಂಜೆ ನಾನು ಚಾಮರಾಜಪೇಟೆಯಲ್ಲಿ ಸಬ್ ಇನ್ಸಪೆಕ್ಟರ್ ಆಗಿ ಕಾರ್ಯ ನಿರ್ವಹಿಸುತ್ತಿರುವಾಗ ಸಂಜೆ 8.30 ಗಂಟೆಗೆ ತನ್ನ ಸ್ನೇಹಿತ ಲೋಕೇಶ್ ದೂರವಾಣಿ ಕರೆ ಮಾಡಿ ನಿಮ್ಮ ತಮ್ಮನಾದ ಸೂರಪ್ಪ @ ಸಿದ್ದೇಗೌಡ ರವರನ್ನು ಯಾರೋ ದ್ವಿಚಕ್ರ ವಾಹನದಲ್ಲಿ ಹುಣಸನಹಳ್ಳಿ ಗ್ರಾಮದಿಂದ ತಟ್ಟೆಕೆರೆ ಗ್ರಾಮಕ್ಕೆ ಹಿಂಬದಿಯಲ್ಲಿ ಕೂರಿಸಿಕೊಂಡು ಹೋಗುವಾಗ ದಾರಿ ಮದ್ಯ ಕರಿಯಪ್ಪನವರ ಜಮೀನಿನ ಹತ್ತಿರ ಗಾಡಿಯನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಓಡಿಸಿ ಗಾಡಿ ಸ್ಕಿಡ್ ಆಗಿ ಬಿದ್ದು ನಿಮ್ಮ ತಮ್ಮನ ತಲೆಯ ಹಿಂಭಾಗಕ್ಕೆ ಪೆಟ್ಟಾಗಿ ಕಿವಿಯಲ್ಲಿ ರಕ್ತ ಬಂದು ಸ್ಥಳದಲ್ಲೇ ಮೃತ ಪಟ್ಟಿದ್ದಾನೆಂದು ಮತ್ತು ದ್ವಿಚಕ್ರ ವಾಹನ ಸವಾರ ಗಾಡಿಯನ್ನು ನಿಲ್ಲಿಸದೇ ತೆಗೆದುಕೊಂಡು ಹೋಗಿದ್ದಾನೆಂದು ಬನ್ನಿಮುಕ್ಲೋಡು ಗ್ರಾಮದ ಶಿವ ಎನ್ನುವವರು ಲೋಕೇಶ್ ರವರಿಗೆ ತಿಳಿಸಿದರು ಎಂದು ನನಗೆ ಹೇಳಿದರು. ನಂತರ ಚಾಸಾ-5 ಸ್ಥಳಕ್ಕೆ ಹೋಗಿ ನೋಡಲಾಗಿ ನನ್ನ ತಮ್ಮ ತಲೆಗೆ ಗಾಯವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾನೆಂದು ನನಗೆ ತಿಳಿಸಿದರು. ನಂತರ ನಾನು ಸಂಬಂಧಪಟ್ಟ ಪೋಲೀಸ್ ಠಾಣೆಗೆ ಕರೆ ಮಾಡಿ ಮೃತದೇಹವನ್ನು ಕನಕಪುರ ಸರ್ಕಾರಿ ಆಸ್ಪತ್ರೆಗೆ ಕಳುಹಿಸುವಂತೆ ಕೋರಿದೆ, ನಂತರ ತಾನು ದಿ:28-04-2016 ರಂದು ಬೆಳಿಗ್ಗೆ 9.30 ಗಂಟೆಗೆ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಬಂದು ನೋಡಲಾಗಿ ಅದು ತನ್ನ ತಮ್ಮನ ಶವ ಎಂದು ಗುರುತಿಸಿದೆ. ನಂತರ ಬೆಳಿಗ್ಗೆ

10 ಗಂಟೆಗೆ ತಾನು ಪೋಲೀಸ್ ಠಾಣೆಗೆ ಹೋಗಿ ಲಿಖಿತ ದೂರನ್ನು ನೀಡಿದೆ. ನಂತರ ದಿಃ22.06.2016 ರಂದು ಆರೋಪಿಯನ್ನು ದಸ್ತಗಿರಿ ಮಾಡಿದ ವಿಚಾರ ತನಗೆ ತಿಳಿಯಿತು. ತಾನು ಸಿಪಿಐ ರವರ ಕಚೇರಿಗೆ ಬಂದೆ. ಆಗ ಆರೋಪಿ ಶಿವಣ್ಣನನ್ನು ತೋರಿಸಿ ಅಪಘಾತ ಮಾಡಿದ ವ್ಯಕ್ತಿ ಇವನೇ ಎಂದು ತನಗೆ ತಿಳಿಸಿದರು. ತಾನು ಆರೋಪಿಯನ್ನು ಗುರುತಿಸಿದೆ. ನಂತರ ನಾನು ಆತನನ್ನು ವಿಚಾರಿಸಲಾಗಿ ದಿಃ27.04.2016 ರಂದು ಜವನಮ್ಮನದೊಡ್ಡಿ ಗ್ರಾಮಕ್ಕೆ ಊರಹಬ್ಬಕ್ಕೆ ತನ್ನ ಮಗಳು ಸಾನಿಕಾ ಜೊತೆ ಹೋಗಿ ಟಿವಿಎಸ್ ಮೋಬೈಡ್ ನಂ.ಕೆಎ-45-ಇ-2737 ರಲ್ಲಿ ವಾಪಸ್ ತಟ್ಟೆಕೆರೆಗೆ ಬರುವಾಗ ಹುಣಸನಹಳ್ಳಿ ಗ್ರಾಮದಲ್ಲಿ ನನ್ನ ತಮ್ಮ ಸೂರಪ್ಪ @ ಸಿದ್ದೇಗೌಡನನ್ನು ಹಿಂದೆ ಕೂರಿಸಿಕೊಂಡು ಬರುವಾಗ ಕರಿಯಪ್ಪನವರ ಜಮೀನಿನ ಬಳಿ ಬರುವಾಗ ತಾನು ಅತಿವೇಗವಾಗಿ ಅಜಾಗರೂಕತೆಯಿಂದ ಓಡಿಸುತ್ತಿದ್ದ ಪರಿಣಾಮ ಆತ ಕೆಳಗೆ ಬಿದ್ದು ತಲೆಗೆ ಮತ್ತು ಕಿವಿಗೆ ಗಾಯವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾನೆಂದು ನನಗೆ ಹೇಳಿದ. ಆಗ ಆತನ ಹಾಗೂ ಆತನ ಮಗಳ ಎಡಕಾಲಿಗೆ ಪೆಟ್ಟಾಗಿರುತ್ತದೆಂದು ಒಪ್ಪಿಕೊಂಡಿದ್ದು, ವಿಷಯ ತಿಳಿಸಿದರೆ ತನ್ನ ಮೇಲೆ ಪ್ರಕರಣ ದಾಖಲಾಗಬಹುದೆಂದು ಭಯದಿಂದ ವಿಷಯ ಯಾರಿಗೂ ತಿಳಿಸದೇ ಊರಿಗೆ ಹೊರಟು ಹೋದೆ ಎಂದು ಹೇಳಿದ. 10-12 ವರ್ಷಗಳ ಹಿಂದೆ ಬ್ರೋಕರ್ ಮೂಲಕ ಗಾಡಿ ತೆಗೆದುಕೊಂಡಿದ್ದು, ತನಗೆ ಚಾಲನಾ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿದ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ ಎಂದು ನಿಮ್ಮ ಮೇಲೆ ಸಾಕ್ಷ್ಯಧಾರವನ್ನು ಒದಗಿಸಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಆರೋಪಿಯ ಉತ್ತರಃ

ಪ್ರಶ್ನೆ 3: ಪ್ರಾಸಾ-5 ಶಿವಕುಮಾರ್ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ27.04.2016 ರಲ್ಲಿ ಸಂಜೆ 4 ಗಂಟೆ ಸಮಯದಲ್ಲಿ ತನ್ನ ಅಣ್ಣ ಸೂರಪ್ಪ ರವರು ಹುಣಸನಹಳ್ಳಿ ಯಿಂದ ಕೆಲಸ ಮುಗಿಸಿಕೊಂಡು ತಟ್ಟೆಕೆರೆಗೆ ವಾಪಸ್ ಬರುವಾಗ ಸುಮಾರು 7.30 ಸಮಯದಲ್ಲಿ ದ್ವಿಚಕ್ರ ವಾಹನದಲ್ಲಿ ಬರಬೇಕಾದರೆ ಶಿವಣ್ಣ ರವರು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ದ್ವಿಚಕ್ರ ವಾಹನದಿಂದ ಹಿಂದೆ ಬಿದ್ದು ಸ್ಥಳದಲ್ಲಿ ಮೃತ ಪಟ್ಟರು, ಆರೋಪಿಯು ತಮಗೆ ಅಪಘಾತದ ವಿಚಾರವನ್ನು ತಿಳಿಸಿರುವುದಿಲ್ಲ ಹಾಗೂ ಆಸ್ಪತ್ರೆಗೂ ಸೇರಿಸಿರುವುದಿಲ್ಲ, ನಂತರ ಪೋಲೀಸ್ ನವರು ಮೃತ ದೇಹವನ್ನು ತೆಗೆದುಕೊಂಡು ಹೋಗಿ ಸರ್ಕಾರಿ ಆಸ್ಪತ್ರೆಯಲ್ಲಿ ಇರಿಸಿದ್ದರು, ಮರುದಿನ ಸುಮಾರು 9.00 ಗಂಟೆ ಸಮಯದಲ್ಲಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಮೃತ ದೇಹವನ್ನು ನೋಡಿರುತ್ತೇವೆ, ಎಂದು ನಿಮ್ಮ ಮೇಲೆ ಸಾಕ್ಷ್ಯಧಾರವನ್ನು ಒದಗಿಸಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಆರೋಪಿಯ ಉತ್ತರಃ

ಪ್ರಶ್ನೆ 4: ಪ್ರಾಸಾ-6 ಸಿದ್ದೇಗೌಡ, ಪಿಐ ಜಾಲಹಳ್ಳಿ ಪೋಲೀಸ್ ಠಾಣೆ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 28.04.2016 ರಂದು ಸದರಿ ಪ್ರಕರಣದ ಮುಂದಿನ ತನಿಖೆಯನ್ನು

ಚಾಸಾ-14 ರವರಿಂದ ಪಡೆದು ತನಿಖೆ ಮುಂದುವರಿಸಿರುತ್ತೇನೆ. ದಿನಾಂಕ 30.04.2016 ರಂದು ಸದರಿ ಪ್ರಕರಣದ ಪಿ ಎಂ ವರದಿಯನ್ನು ಚಾಸಾ-13 ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಪಂಚ ಸಾಕ್ಷಿಗಳಾದ ಚಾಸಾ-3 ಮತ್ತು ಚಾಸಾ-5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 20.06.2016 ರಂದು ಸದರಿ ಪ್ರಕರಣದ ವಾಹನದ ಮಾಲೀಕ ಹಾಗೂ ಆರೋಪಿಗೆ ಐಎಂವಿ ಕಾಯ್ದೆ ಅಡಿ ನೋಟೀಸು ಜಾರಿ ಮಾಡಿರುತ್ತೇನೆ. ದಿನಾಂಕ 22.06.2016 ರಂದು ಆರೋಪಿಯಿಂದ ಪ್ರತ್ಯುತ್ತರವನ್ನು ಪಡೆದುಕೊಂಡು ಅದೇ ದಿನ ಆತನ ದಸ್ತಗಿರಿ ನಿಯಮಾವಳಿಯನ್ನು ಪಾಲಿಸಿ ಸೂಕ್ತ ಜಾಮೀನಿನ ಮೂಲಕ ಆತನನ್ನು ಬಿಡುಗಡೆ ಗೊಳಿಸಲಾಯಿತು. ಆರೋಪಿಯು ಹಾಜರು ಪಡಿಸಿದ ಕೆಎ-45-ಇ-2737 ಎಕ್ಸಲ್ ದ್ವಿಚಕ್ರ ವಾಹನವನ್ನು ಚಾಸಾ-5 ಮತ್ತು 11 ರವರ ಸಮಕ್ಷಮ ಕೋಡಿಹಳ್ಳಿ ಪೋಲೀಸ್ ಠಾಣೆಯ ಆವರಣದಲ್ಲಿ ಬೆಳಿಗ್ಗೆ 9.15 ರಿಂದ 9.45 ರವರೆಗೂ ಅಮಾನತು ಪಂಚನಾಮೆಯ ಪ್ರಕ್ರಿಯೆ ಮಾಡಿ ಪಂಚನಾಮೆಯನ್ನು ತಯಾರಿಸಿ ಸಹಿಗಳನ್ನು ಪಡೆದುಕೊಂಡು ವಾಹನವನ್ನು ಅಮಾನತು ಪಡಿಸಿಕೊಂಡಿರುತ್ತೇನೆ. ಹಾಗೂ ಅದರಂತೆ ನ್ಯಾಯಾಲಯಕ್ಕೆ ಪಿ ಎಫ್ ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ-5, ಚಾಸಾ-1 ಮತ್ತು ಚಾಸಾ-2 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 20.08.2016 ರಂದು ಚಾಸಾ-12 ರವರಿಂದ ಐಎಂವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 23.12.2016 ರಂದು ಪ್ರಕರಣದ ತನಿಖೆ ಮುಕ್ತಾಯ ಮಾಡಿ ಆರೋಪಿಗಳ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ, ಎಂದು ನಿಮ್ಮ ಮೇಲೆ ಸಾಕ್ಷ್ಯಧಾರವನ್ನು ಒದಗಿಸಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಆರೋಪಿಯ ಉತ್ತರಃ

ಪ್ರಶ್ನೆ 5ಃ ನಿಮಗೆ ಬೇರೆ ಏನಾದರೂ ಹೇಳುವುದು ಇದೆಯಾ?

ಆರೋಪಿಯ ಉತ್ತರಃ

ಪ್ರಶ್ನೆ 6 : ನಿಮ್ಮ ಪರ ಸಾಕ್ಷಿದಾರರ ಇದ್ದಾರೆಯೇ?

ಆರೋಪಿಯ ಉತ್ತರಃ

(ಮೇಲ್ಕಂಡ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಕೇಳಲಾಯಿತು, ಆರೋಪಿ ಕೊಟ್ಟ ಉತ್ತರಗಳನ್ನು ಯಥಾಸ್ಥಿತಿ ಬರೆದುಕೊಂಡ ಪ್ರಕಾರ ದೃಢೀಕರಿಸಲಾಗಿದೆ )

ದಿನಾಂಕ 24.01.2026

(ಲತಾಶ್ರೀ ಬಿ.ವಿ )
ಅಧಿಕ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕನಕಪುರ.